ಯಾವ ಕೆಲಸ ಮಾಡಿದರೂ ಅದು ಮಲತಾಯಿ ಧೋರಣೆ ಮಾಡಿದಂತಲ್ಲ. ತಾವುಗಳು ಸಜೆಶನ್ಸ್ ಕೊಟ್ಟಿದ್ದೀರಿ. ಈಗಾಗಲೇ ಮಾಡಿದ ಬೋರ್ಡ್‌ಗಳು ಯಾವರೀತಿಯಲ್ಲಿ ಕೆಲಸ ಮಾಡುತ್ತವೆ ಎಂಬುದನ್ನು ನೋಡಬೇಕಾಗಿದೆ. ಸ್ಯಾಚುಟರಿ ಬೋರ್ಡ್‌ಗಳಾಗಿ ಅವುಗಳಿಗೆ ಮೆಂಬರ್ಸ್ ಒಂದೂ ಮಾಡಿಲ್ಲ. ಮೊದಲು ಅವುಗಳ ಕೆಲಸ ನೋಡಿಕೊಂಡು ತಾವುಗಳು ಕೊಟ್ಟ ಸೂಚನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ತುಮಕೂರು ಚಿತ್ರದುರ್ಗ ಭಾಗಕ್ಕೆ ಜಾಸ್ತಿ ಹಣ ಕೊಟ್ಟುಬಿಡಿ.

ಶ್ರೀ ಕೆ. ಶಿವರಾಮು : ಸಚಿವರು, ಎರಡು ಬೋರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂದು ನೋಡಿಕೊಂಡು ಅನಂತರ ಮೂರನೆಯ ಬೋರ್ಡ್ ಮಾಡುವ ಬಗ್ಗೆ ಯೋಚನೆ ಮಾಡೋಣ ಅಂತ ಹೇಳಿದ್ದಾರೆ. ಹೈದರಾಬಾದ್ ಅಭಿವೃದ್ಧಿ ಮಂಡಳಿ ರಚನೆಯಾದಾಗ ಅದು ಯಾವರೀತಿ ಅನುಷ್ಠಾನಕ್ಕೆ ಬರುತ್ತದೆ ಅಂತ ಪರಿಶೀಲನೆ ಮಾಡುವ ಮೊದಲೇ ಮಲೆನಾಡು ಅಭಿವೃದ್ಧಿ ಮಂಡಳಿ ರಚನೆ ಮಾಡಿದರು. ಈಗ ಡ್ರೈಲ್ಯಾಂಡ್ ಅಭಿವೃದ್ಧಿ ಥೋಜನೆ ಡ್ರೈ ಏರಿಯಾದಲ್ಲಿ ಆರಸೀಕೆರೆ ಹಾಸನದ ಪೂರ್ವಭಾಗ ಮತ್ತು ಚಿತ್ರದುರ್ಗ ಹೀಗೆ ಯಾವ ಜಿಲ್ಲೆಗಳಲ್ಲಿ ಎಲ್ಲಿ ಬರಗಾಲ ಸತತವಾಗಿ ಬರುತ್ತದೆಯೋ ಆ ಏರಿಯಾದಲ್ಲಿ ತಗೊಂಡು ಈಗಾಗಲೇ ಬೇರೆ ರೀತಿಯಲ್ಲಿ ತಗೊಂಡು ಕೆಲಸವನ್ನು ಶುರುಮಾಡಿದ್ದಾರೆ. ಈ ಯೋಜನೆಯನ್ನೂ ಇದರ ಜೊತೆಗೇ ತಗೊಂಡು ಮುಖ್ಯವಾಗಿ ರಸ್ತೆ ಅಭಿವೃದ್ಧಿ ಮಾಡುವುದು ಮುಖ್ಯವಾದ ಪ್ರಶ್ನೆ ಅಲ್ಲ. ಅಲ್ಲಿ ಬರಗಾಲ ಸತತವಾಗಿ ಬಂದು ಏನು ನೀರಾವರಿ ಸೌಲಭ್ಯ ಇಲ್ಲದೇ ಕಡಿಮೆ ಮಳೆಯನ್ನು ಸದುಪಯೋಗಪಡಿಸಿಕೊಳ್ಳಲು ನಾವು ಏನು ಯೋಜನೆ ರೂಪಿಸುತ್ತಿದ್ದೇವೋ, ಆ ಯೋಜನೆಯಲ್ಲಿ ಡ್ರೈಲ್ಯಾಂಡ್ ಅಭಿವೃದ್ಧಿ ಮಂಡಳಿ ಎಂದು ಮಾಡಿ ಕೆಲಸವನ್ನು ತೆಗೆದುಕೊಂಡರೆ ಅಪ್ಪು ಹೇಗೆ ಅನುಷ್ಠಾನಕ್ಕೆ ಬರುತ್ತವೆಯೋ ಅದೇ ರೀತಿ ಇದು ಅನುಷ್ಠಾನಕ್ಕೆ ಬರಲು ಅವಕಾಶವಾಗುತ್ತದೆ ಆ ಭಾಗದ ಜನಕ್ಕೂ ಅನುಕೂಲವಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅವರು ಸೂಚನೆ ಕೊಟ್ಟಿದ್ದಾರೆ, ಪರಿಶೀಲನೆ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಹಾಗಿದ್ದರೆ ಮುಂದಿನ ರೂಪರೇಷೆಗಳೇನು ಎಂದು ಸಚಿವರನ್ನು ಕೇಳಿದ್ದೇನೆ ಅದಕ್ಕೆ ಬೇರೆ ಎರಡು ಬೋರ್ಡ್‌ಗಳನ್ನು ಯಾವರೀತಿ ಮಾಡಿದ್ದಾರೆ ಅದೇ ರೀತಿ ನಮ್ಮ ಜಿಲ್ಲೆಗಳ ಅಭಿವೃದ್ಧಿ ಆಗುವ ಬೋರ್ಡ್‌ನ್ನು ಮಾಡಲು ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್ ನಾಗರತ್ನಮ್ಮ : ಈಗತಾನೇ ಉತ್ತರ ಹೇಳಿದ್ದೇನೆ, ಅವರು ಸೂಚನೆ ಕೊಟ್ಟಿದ್ದಾರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಶ್ರೀ ಕಾಳಮರಿಗೌಡರ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಕೇಳಿದ್ದೇನೆ, ದಯವಿಟ್ಟು ಮುಂದಕ್ಕೆ ಹಾಕಿ.

ಉಪಾಧ್ಯಕ್ಷೆಯವರು : ಸ್ವಲ್ಪ ಕಾಲಾವಕಾಶ ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್ ಕಾಳಮರಿಗೌಡ : ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

1332. ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆಯಾದ ಹೊನ್ನಮ್ಮನ ಹಳ್ಳ 1ನೇ ಹಂತಕ್ಕೆ ಇಲ್ಲಿಯವರೆಗೆ ಒದಗಿಸಿರುವ ಮೊತ್ತವೆಷ್ಟು?

ಆ) ಈ ಯೋಜನೆಗಾಗಿ ಜೀವವಿಮಾ ನಿಗಮದಿಂದ ಸರ್ಕಾರ ಪಡೆದಿರುವ ಮೊತ್ತವೆಷ್ಟು?

ಇ) ಈ ಸಾಲದ ಮೊತ್ತ ನಗರ ಸಭೆಗೆ ಹೆಚ್ಚಿನ ಹೊರೆಯಾಗಲಿರುವುದರಿಂದ ಈ ಸಾಲದ ಮೊತ್ತವನ್ನು ಸರ್ಕಾರವೇ ವಹಿಸಿಕೊಂಡು ನಗರ ಸಭೆಗೆ ಮನ್ನಾ ಮಾಡುವ ಬಗ್ಗೆ ಸರ್ಕಾರವೇನಾದರೂ ಆಲೋಚಿಸಿದೆಯೇ?

ಈ) ಹೊನ್ನಮ್ಮನ ಹಳ್ಳ 2ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 119.52 ಲಕ್ಷಗಳು.

ಆ) ಇಲ್ಲ. ಆದಾಗ್ಯೂ ರೂ. 38.09 ಲಕ್ಷ ಹಣವನ್ನು ಸಾಲವಾಗಿ ಹುಡ್ಕೊ ನಿಗಮದಿಂದ ಪಡೆಯಲಾಗಿದೆ.

ಇ) ಇಲ್ಲ.

ಈ) ಮಾರ್ಚಿ 1993ರ ಒಳಗೆ ಸಂಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷೆಯವರೇ, ಈ ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ಸವಲತ್ತಿನ ಬಗ್ಗೆ ಮೊದಲನೇ ಹಂತದ ಕಾರ್ಯವನ್ನು ಏರ್ಪಡಿಸಿಕೊಂಡಿರುವಾಗ 80 ಲಕ್ಷ ರೂ. ಅಂದಾಜು ತಯ್ಯಾರಿಸಿ ಈಗ 119.57 ಲಕ್ಷ ರೂ. ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಇದು ಜಾಸ್ತಿ ಖರ್ಚಾಗಿರುವ ನಗರಸಭೆಯವರ ಮೇಲೆ ಭಾರ ಬೀಳುತ್ತದೋ ಅಥವಾ ಸರ್ಕಾರವೇ ಈ ಹಣ ಕೊಡುತ್ತದೋ ಅಂತ ಸಚಿವರಿಂದ ಉತ್ತರಬೇಕಾಗಿದೆ. ಎರಡನೇ ಹಂತದ ಯೋಜನೆಗಾಗಿ ನನ್ನ ನಾಲ್ಕನೇ ಪ್ರಶ್ನೆಗೆ 31-3-93ರಲ್ಲಿ ನಾವು ಪೂರೈಸಿಕೊಡ್ತೇವೆ ಅಂತ ಉತ್ತರಿಸಿದ್ದಾರೆ. ಟೆಂಡರ್ ಕರೆದಿರುವ ಹಾಗೆ 31-3-92ರಲ್ಲೇ ಇದು ಮುಗಿಯಬೇಕಾಗಿತ್ತು ಆದರೆ ಇಲ್ಲಿಯವರೆಗೆ ಮುಗಿದಿಲ್ಲ, ಸಚಿವರು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಹೆಚ್ಚುವರಿ ಹಣವನ್ನು ಸರ್ಕಾರದಿಂದ ಒದಗಿಸಲಾಗಿದೆ ಈ ಎರಡನೇ ಹಂತ ಮಾರ್ಚಿ 92-93ರಲ್ಲಿ ಪೂರ್ಣಗೊಳಿಸುವ ಕೆಲಸ ಮಾಡ್ತಾಇದೇವೆ.

ಯಲಹಂಕದಲ್ಲಿರುವ ಗೃಹಮಂಡಳಿ ಮನೆಗಳ ಬಗ್ಗೆ

310 (1940) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ಕಟ್ಟಿಸಿರುವ ಯಲಹಂಕ ನಾಲ್ಕನೇ ಹಂತದಲ್ಲಿ 707 ಮನೆಗಳ ನಿರ್ಮಾಣ ಯಾವ ಹಂತದಲ್ಲಿದೆ?

ಆ) ಅವುಗಳ ಭದ್ರತೆ ಬಗ್ಗೆ ತಾಂತ್ರಿಕರ ಅಭಿಪ್ರಾಯವೇನು? ಮತ್ತು ಆ ಯೋಜನೆಯನ್ನು ಪೂರ್ಣಗೊಳಿಸುವ ಅಥವಾ ಬೇರೇನಾದರೂ ಬದಲು ಮಾಡುವ ಯೋಜನೆ ಇದೆಯೇ?